78

# <u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ : M/s Green Infra Wind Energy Limited ರವರಿಗೆ ಬಳ್ಳಾರಿ ಜಿಲ್ಲೆಯ, ಕೂಡ್ಲಗಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 50.4 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಕುರಿತು.

**<u>ಓದಲಾಗಿದೆ</u> :** 1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರ ಪತ್ರ ಸಂಖ್ಯೆ:KREDL/08/GIWEL-50.4 MW/ Ballari/F-16/2022/439, ದಿನಾಂಕ:21.02.2022.

2) ದಿನಾಂಕ:09.03.2022 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿ.

<u>ಪ್ರಸ್ತಾವನೆ :-</u>

ಮೇಲೆ ಓದಲಾದ (1)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s Green Infra Wind Energy Limited ರವರು ಬಳ್ಳಾರಿ ಜಿಲ್ಲೆಯ, ಕೂಡ್ಲಗಿ ತಾಲ್ಲೂಕಿನ ಜಾರ್‌ಮಲೈ, ಹಾರವಾಡಿ, ಗೆಡ್ಡಲ್‌ಗಟ್ಟಿ ಮತ್ತು ಸಿದ್ದಯ್ಯನಹಟ್ಟಿ ಗ್ರಾಮಗಳಲ್ಲಿ 50.4 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕ್ರೆಡಲ್‌ಗೆ ಸಲ್ಲಿಸಿರುವುದಾಗಿ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮುಖಾಂತರ ಸ್ವಂತ ಬಳಕೆಗೆ/ ಮೂರನೇ ವ್ಯಕ್ತಿಗೆ ಮಾರಾಟ ಮಾಡುವ ವರ್ಗದಡಿ ಪ್ರತಿ ವಿಂಡ್ ಟರ್ಬೈನ್ ಗೆ 4 ಎಕರೆಯಂತೆ Footprint basis ಲೆಕ್ಕೀಕರಿಸಿ, ಜಮೀನುಗಳನ್ನು ಉಪಯೋಗಿಸುವುದು ಮತ್ತು ಪವನ ವಿದ್ಯುತ್ ಘಟಕಗಳ ಅಂತರವನ್ನು MNRE ಸುತ್ತೋಲೆ/ಮಾರ್ಗಸೂಚಿಯಂತೆ ಅಳವಡಿಸುವಂತೆ ಷರತ್ತುಗಳನ್ನು ವಿಧಿಸಿ, ಹಂಚಿಕೆ ನೀಡುವಂತೆ ಕೋರಿರುವುದಾಗಿ ತಿಳಿಸಿರುತ್ತಾರೆ.

M/s Green Infra Wind Energy Limited ದಿನಾಂಕ:18.06.2010ರಂದು ನೋಂದಾವಣೆ ಗೊಂಡಿದ್ದು, ಇದರ ನೋಂದಾಯಿತ ಕಚೇರಿಯು ಹರಿಯಾಣದ ಗುರುಗಾಂವ್‌ನಲ್ಲಿ ಸ್ಥಾಪಿತಗೊಂಡಿರುತ್ತದೆ. ಸದರಿಯವರ ನೆಟ್‌ವರ್ತ್ ದಿನಾಂಕ:31.03.2021ರ ಅಂತ್ಯಕ್ಕೆ ರೂ.1755.54 ಕೋಟಿಗಳಾಗಿರುತ್ತದೆ ಎಂದು ಚಾರ್ಟೆಡ್ ಅಕೌಂಟೆಂಟ್ ರವರು ದೃಢೀಕರಣ ಪತ್ರವನ್ನು ನೀಡಿರುತ್ತಾರೆ.

ಮೇಲೆ ಓದಲಾದ (2)ರ ಹಂಚಿಕೆ ಸಮಿತಿ ಸಭೆಯಲ್ಲಿ M/s Green Infra Wind Energy Limited ರವರು ಬಳ್ಳಾರಿ ಜಿಲ್ಲೆಯ, ಕೂಡ್ಲಿಗಿ ತಾಲ್ಲೂಕಿನ ಜಾರ್‌ಮಲೈ, ಹಾರವಾಡಿ, ಗೆಡ್ಡಲ್‌ಗಟ್ಟಿ ಮತ್ತು ಸಿದ್ದಯ್ಯನಹಟ್ಟಿ ಗ್ರಾಮಗಳಲ್ಲಿ State Grid ವರ್ಗದಡಿಯಲ್ಲಿ ಹಂಚಿಕೆ ನೀಡುವಂತೆ ಕೋರಿರುವ 50.4 ಮೆ.ವ್ಯಾ ಸಾಮರ್ಥ್ಯದ ಸ್ಥಳವು ಹಂಚಿಕೆಗೆ ಲಭ್ಯವಿದ್ದು, ಯೋಜನೆಯ ಸ್ಥಳವು ಖಾಸಗಿ ಜಮೀನಾಗಿರುತ್ತದೆ. ಸದರಿಯವರು ಅಳವಡಿಸಲು ಉದ್ದೇಶಿಸಿರುವ 2.1 ಮೆ.ವ್ಯಾ ಸಾಮರ್ಥ್ಯದ ವಿಂಡ್ ಟರ್ಬೈನ್ ನ ಅಕ್ಷಾಂಶ ಮತ್ತು ರೇಖಾಂಶಗಳನ್ನು ಸಹ ನೀಡಿರುತ್ತಾರೆ. ಯೋಜನೆಗೆ ಬೇಕಾಗುವ ಜಮೀನು ಪಡೆಯುವುದು ಅಭಿವೃದ್ಧಿದಾರರ ಜವಾಬ್ದಾರಿಯಾಗಿರುತ್ತದೆ ಹಾಗೂ ಸದರಿಯವರು 2.1 ಮೆ.ವ್ಯಾ ಸಾಮರ್ಥ್ಯದ 24 ವಿಂಡ್ ಟರ್ಬೈನ್‌ನನ್ನು ಅಳವಡಿಸುತ್ತಿದ್ದು, ಸದರಿಯವರು ಅಳವಡಿಸುವ ಟರ್ಬೈನ್ ನ footprint ಜಾಗಕ್ಕೆ 4 ಎಕರೆ ಜಮೀನನ್ನು Topomap 57 B/5 ರಲ್ಲಿ ಮಾತ್ರ ಉಪಯೋಗಿಸಬಹುದಾಗಿರುತ್ತದೆ. ಸದರಿಯವರು 2.1 ಮೆ.ವ್ಯಾ ಸಾಮರ್ಥ್ಯದಿಂದ ಉತ್ಪಾದಿಸುವ ವಿದ್ಯುತ್ ನ್ನು State Grid ವರ್ಗದಡಿಯಲ್ಲಿ KPTCL ನ ಕೂಡ್ಲಿಗಿ 220/66 kV substation ಗೆ evacuate ಮಾಡುವುದಾಗಿ ತಿಳಿಸಿರುತ್ತಾರೆ. ಆದರೆ, ಮುಖ್ಯ ಇಂಜಿನಿಯರ್ (Planning & Co-ordination), ಕೆ.ಪಿ.ಟಿ.ಸಿ.ಎಲ್ ರವರು ಸಭೆಯಲ್ಲಿ ಸದರಿ ಯೋಜನೆಗೆ ಕೂಡ್ಲಿಗಿ 220 kV substation ನಲ್ಲಿ evacuation ಲಭ್ಯತೆ ಇರುವುದಿಲ್ಲವೆಂದು ತಿಳಿಸಿ, ಸದರಿ ಯೋಜನೆಯನ್ನು ದಾವಣಗೆರೆ ಜಿಲ್ಲೆಯ ಜಗಳೂರು 400/220 kV KPTCL ನ substation ಗೆ evacuate ಮಾಡಬಹುದಾಗಿದೆ ಎಂದು ತಿಳಿಸುತ್ತಾ, ಈ ಕೆಳಕಂಡ ಷರತ್ತುಗಳಿಗೊಳಪಟ್ಟು, M/s Green Infra Wind Energy Limited ರವರಿಗೆ 50.4 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ನೀಡಲು ಸಮಿತಿಯು ಸರ್ವಾನುಮತಿಯಿಂದ ಶಿಫಾರಸ್ಸು ಮಾಡಿರುತ್ತದೆ.

....2

i. ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ ನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮುಖಾಂತರ ಸ್ವಂತ ಬಳಕೆ/3 ನೇ ವ್ಯಕ್ತಿಗೆ ಮಾರಾಟ ಮಾಡಲು

ii. ಸದರಿ ಯೋಜನೆಗೆ, ಜಗಳೂರು 400/220 kV Substation ಗೆ KPTCL ನಿಂದ evacuation ಅನುಮತಿ ನೀಡುವುದು.

iii. ಈಗಾಗಲೇ ಇತರೆ ಅಭಿವೃಧ್ಧಿದಾರರುಗಳು ಹಂಚಿಕೆ/ತಾತ್ವಿಕ ಅನುಮೋದನೆಯನ್ನು ಪಡೆದಿರುವ ಪ್ರದೇಶದಲ್ಲಿ ಪ್ರಸ್ತಾಪಿತ ಯೋಜನೆಯು Overlap ಆಗಿದ್ದಲ್ಲಿ, ಸದರಿಯವರು ಕೋರಿರುವ ಪ್ರಸ್ತಾವನೆಯ ಹಂಚಿಕೆಯು ರದ್ದುಗೊಳ್ಳುತ್ತದೆ.

**Tentative Latitude and Longitude of WTG Locations for 50.4 MW capacity Wind Power Project of M/s Green Infra Wind Energy Limited**

| Location No | Latitude | Longitude |
|---|---|---|
| JAR 001 | 14° 48' 2.37" | 76° 27' 47.37" |
| JAR 002 | 14° 48' 27.28" | 76° 28' 2.53" |
| JAR 003 | 14° 48' 52.09" | 76° 27' 56.08" |
| JAR 004 | 14° 49' 14.26" | 76° 27' 35.46" |
| JAR 005 | 14° 49' 28.63" | 76° 28' 1.92" |
| JAR 006 | 14° 49' 6.92" | 76° 28' 14.48" |
| JAR 007 | 14° 48' 49.86" | 76° 28' 22.87" |
| JAR 008 | 14° 47' 57.91" | 76° 28' 17.25" |
| JAR 009 | 14° 48' 13.06" | 76° 28' 54.80" |
| JAR 010 | 14° 48' 42.44" | 76° 28' 40.65" |
| JAR 011 | 14° 49' 24.42" | 76° 28' 43.5" |
| JAR 012 | 14° 49' 38.85" | 76° 29' 59.53" |
| JAR 013 | 14° 49' 14.66" | 76° 29' 38.90" |
| JAR 014 | 14° 49' 22.11" | 76° 28' 53.76" |
| JAR 015 | 14° 48' 59.50" | 76° 28' 36.33" |
| JAR 016 | 14° 48' 45.64" | 76° 28' 25.03" |
| JAR 017 | 14° 48' 31.46" | 76° 28' 45.73" |
| JAR 018 | 14° 48' 28.87" | 76° 29' 8.26" |
| JAR 019 | 14° 48' 30.49" | 76° 29' 53.73" |
| JAR 020 | 14° 47' 59.85" | 76° 30' 1.8" |
| JAR 021 | 14° 48' 39.85" | 76° 28' 28.99" |
| JAR 022 | 14° 48' 16.95" | 76° 28' 52.21" |
| JAR 023 | 14° 48' 22.10" | 76° 29' 35.772" |
| JAR 024 | 14° 48' 55.33" | 76° 29' 5.136" |

ಕೆ.ಇ.ಆರ್.ಸಿ.ಯು ದಿನಾಂಕ:08.02.2022ರ ಆದೇಶದಲ್ಲಿ ನವೀಕರಿಸಬಹುದಾದ ಇಂಧನ ಯೋಜನೆಗಳಿಗೆ ಬ್ಯಾಂಕಿಂಗ್ ಸೌಲಭ್ಯವನ್ನು ಒಂದು ವರ್ಷದ ಅವಧಿಗೆ ನೀಡುವ ವಿಷಯದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:1061/2019 ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲ್ ಸಂಖ್ಯೆ:9619-9637/2019ರಲ್ಲಿ ಮಾನ್ಯ ನ್ಯಾಯಾಲಯಗಳು ನೀಡುವ ಅಂತಿಮ ಆದೇಶಗಳಿಗೊಳಪಟ್ಟು ದಿನಾಂಕ:31.07.2022ರವರೆಗೆ ವಿಸ್ತರಿಸಿ ಆದೇಶಿಸಿರುತ್ತದೆ.

…3